

# ಗೋಲ್ಕೊಂಡ ಕೋಟೆಯೊಳಗೆ..

ಚಿತ್ರ–ಲೇಖನ:
**ಜಿ.ಆರ್. ಪಂಡಿತ್, ಸಾಗರ**

ಹೈದರಾಬಾದಿನ ಗೋಲ್ಕೊಂಡ ಭಾರತದ ಅತಿ ಹಳೆಯ ಕೋಟೆಗಳಲ್ಲೊಂದು. 1143 ರಲ್ಲಿ ವಾರಂಗಲ್ಲಿನ ಕಾಕತೀಯ ಅರಸ ಪ್ರತಾಪ ರುದ್ರ ದೇವ ಮಣ್ಣಿನ ಕೋಟೆಯನ್ನು ನಿರ್ಮಿಸಿದ ಎನ್ನಲಾಗುತ್ತದೆ. ವಾರಂಗಲ್ಲಿನ ರಾಜಾ ಕೃಷ್ಣದೇವ 1362 ರಲ್ಲಿ ಬಹಮನಿ ರಾಜವಂಶದ ಮಹಮ್ಮದ್‌ಶಾಗೆ ಗೋಲ್ಕೊಂಡ ಕೋಟೆಯನ್ನು ಹಸ್ತಾಂತರಿಸಿದನು. ಮಹಮ್ಮದ್ ಶಾ ಆಳ್ವಿಕೆಯಲ್ಲಿ ಈ ಕೋಟೆಗೆ ಮಹಮ್ಮದ ನಗರ ಎಂದು ಮರು ನಾಮಕರಣವೂ ಆಯಿತು ಎಂದೂ ಹೇಳಲಾಗುತ್ತದೆ.

ಇತಿಹಾಸ ಹೇಳುವಂತೆ ಮೂಲದಲ್ಲಿ ನಿರ್ಮಾಣಗೊಂಡ ಈ ಮಣ್ಣಿನ ಕೋಟೆ ಸದೃಢವಾಗಿರಲಿಲ್ಲ. ಹೆಸರಿಗಷ್ಟೆ ಕೋಟೆಯಾಗಿತ್ತು. 1518 ರಲ್ಲಿ 'ಕುತುಬ್ ಷಾಹಿ' ರಾಜವಂಶದ ಆಳ್ವಿಕೆಯ ಮೊದಲ ಮೂರು ಅರಸರ ಕಾಲದಲ್ಲಿ ಗೋಲ್ಕೊಂಡ ಕೋಟೆಯ ಪುನರ್ ನಿರ್ಮಾಣ ಕಾರ್ಯ ನಡೆಯಿತು. 1518 ರಲ್ಲಿ ಆರಂಭಗೊಂಡ ಕೋಟೆಯ ನಿರ್ಮಾಣ ಕಾರ್ಯ 1580 ರ ಅವಧಿಯಲ್ಲಿ ಮುಕ್ತಾಯವಾಯಿತು, 1587 ರಲ್ಲಿ 'ಕುತುಬ್ ಷಾಹಿ' ರಾಜವಂಶದ ನಾಲ್ಕನೆಯ ರಾಜ 'ಖುಲಿ ಕುತುಬ್ ಷಾ' ಈ ಕೋಟೆಗೆ ತಾಗಿ ತನ್ನ ಪ್ರೇಯಸಿ 'ಭಾಗಮತಿ'ಯ ನೆನಪಿಗಾಗಿ ನಗರವೊಂದನ್ನು ನಿರ್ಮಿಸಿ ಅದಕ್ಕೆ ಭಾಗ್ಯ ನಗರ ಎಂದು ನಾಮಕರಣ ಮಾಡಿದನು. ಅದೇ ಈಗಿನ ಹೈದರಾಬಾದ್ ನಗರ. 2018 ಜನವರಿಗೆ ಗೋಲ್ಕೊಂಡ ಕೋಟೆ ಮತ್ತು ಅದರ ನಿರ್ಮಾಣಕ್ಕೆ ಕಾರಣರಾದ 'ಕುತುಬ್ ಷಾಹಿ' ರಾಜವಂಶದ ಆಳ್ವಿಕೆಯ ಆರಂಭಕ್ಕೆ 500 ವರ್ಷಗಳು ತುಂಬುತ್ತಿವೆ.

ಹೈದರಾಬಾದ್‌ನ ಪಶ್ಚಿಮ ಕ್ಕೆ 11 ಕಿಲೋಮೀಟರ್ ದೂರದಲ್ಲಿರುವ ಈ ಕೋಟೆ 5 ಮೈಲಿ ಸುತ್ತಳತೆ ಹೊಂದಿದೆ. 9 ಬಾಗಿಲು, 52 ಕಿಟಕಿ ಮತ್ತು 48 ಸುರಂಗ, 87 ಗೋಪುರಗಳನ್ನು ಹೊಂದಿದೆ. ಬಾಲ ಹಿಸರ್ ಗೇಟಿನ ಎದುರು ಯುದ್ಧ ಕಾಲದಲ್ಲಿ ವೈರಿಗಳ ಚಲನ ವಲನ ಗಮನಿಸುವದಕ್ಕಾಗಿ ಪರದೆ ಗೋಡೆಗಳನ್ನು ನಿರ್ಮಿಸಲಾಗಿದೆ. ಇಲ್ಲಿನ ಇನ್ನೊಂದು ವಿಶೇಷವೆಂದರೆ ಪ್ರತಿಧ್ವನಿಗೊಳ್ಳುವ ತಾಂತ್ರಿಕತೆ. ಪ್ರವೇಶ ದ್ವಾರದ ನಿರ್ಧಿಷ್ಟ ಸ್ಥಳದಲ್ಲಿ ಹೊಡೆದ ಚಪ್ಪಾಳೆಯ ಧ್ವನಿ ಸುಮಾರು ಕಿಲೋಮೀಟರ್ ದೂರದಲ್ಲಿರುವ ಕೋಟೆಯ ತುತ್ತ ತುದಿಯಲ್ಲಿ ಕೇಳಿಸುತ್ತದೆ.



ಕೋಟೆಯ ಪೂರ್ವ ದಿಕ್ಕಿನ 'ಫತೇಹ್ ದರ್ವಾಜಾ' (ವಿಜಯದ ಬಾಗಿಲು) ಮುಖಾಂತರ ಒಳ ಪ್ರವೇಶಿಸಿದರೆ ಗೋಲ್ಕೊಂಡಾ ಕೋಟೆಯ 10 ಕಿಲೋಮೇಟರ್ ವ್ಯಾಪ್ತಿಯ ವಿಸ್ತಾರ ಕಣ್ಣಿಗೆ ಬೀಳುತ್ತದೆ. ಅರಮನೆಯಂತಹ ಅಂತಸ್ತುಗಳುಳ್ಳ ಕಟ್ಟಡಗಳು, ಗೋಪುರಗಳು, ಸುರಂಗಗಳು, ದರ್ಬಾರ್ ಹಾಲ್, ಧಾನ್ಯ ಸಂಗ್ರಹಣೆಯ ಗೋದಾಮುಗಳು, ಮಸೀದಿಗಳು, ದೇವಾಲಯ, ತೈಲ ಸಂಗ್ರಹಣಾಲಯ, ಯುದ್ಧಕ್ಕೆ ಬೇಕಾದ ಆಯುಧಗಳ ಸಂಗ್ರಹಾಲಯ, ದೊಡ್ಡದಾದ ಬಾವಿ, ನೀರಿನ ತೊಟ್ಟಿಗಳು, ಉದ್ಯಾನ ಹೀಗೆ ಹಲವು ಅವಶೇಷಗಳು ಕೋಟೆಯ ಗತ